ಪತ್ರಿಕಾ ತುಣುಕುಗಳು
PAPER CLIPPINGS
ದಿನಾಂಕ : DATE : 5/12/19
ಶಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :

# ನಾಲ್ಕು ಕ್ಷೇತ್ರಗಳಿಗೆ ಇಂದು ಮತದಾನ

## ಬೆಳಗ್ಗೆ 7 ಗಂಟೆಗೆ ಆರಂಭ | 14.32 ಲಕ್ಷ ಮತದಾರರಿಗೆ ಮತದ ಹಕ್ಕು | 1,361 ಮತಗಟ್ಟೆಗಳ ಸ್ಥಾಪನೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಗರದ ನಾಲ್ಕು ಕ್ಷೇತ್ರಗಳಲ್ಲಿ ನಡೆಯುತ್ತಿರುವ ಉಪಚುನಾವಣೆ ಮತದಾನ ಪ್ರಕ್ರಿಯೆ ಗುರುವಾರ (ಡಿ.5) ಬೆಳಗ್ಗೆ 7 ಗಂಟೆಗೆ ಆರಂಭವಾಗಲಿದೆ. ಒಟ್ಟು 14,32,394 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ.

ರಾಜ್ಯ ಸರ್ಕಾರದ ಭವಿಷ್ಯ ನಿರ್ಧರಿಸಿರುವ ಉಪಚುನಾವಣೆಗೆ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಕೆ.ಆರ್.ಪುರ, ಶಿವಾಜಿನಗರ, ಯಶವಂತಪುರ ಮತ್ತು ಮಹಾಲಕ್ಷ್ಮೀ ಲೇಔಟ್ ಕ್ಷೇತ್ರ ವ್ಯಾಪ್ತಿಯಲ್ಲಿನ 7,41,523 ಪುರುಷ, 6,90,628 ಮಹಿಳಾ ಮತದಾರರು ಮತ್ತು 243 ಇತರ ಮತದಾರರು ಮತಚಲಾವಣೆ ಮಾಡಲಿದ್ದಾರೆ.

**5,988 ಸಿಬ್ಬಂದಿ:** ಮತದಾನ ಪ್ರಕ್ರಿಯೆಗಾಗಿ ನಾಲ್ಕೂ ಕ್ಷೇತ್ರಗಳಲ್ಲಿ 1,361 ಮತಗಟ್ಟೆ ಸ್ಥಾಪಿಸಲಾಗಿದೆ. ಅದರಲ್ಲಿ 284 ಸೂಕ್ಷ್ಮ ಮತ್ತು 44 ಅತಿಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದೆ. ಮತದಾನ ಪ್ರಕ್ರಿಯೆಗಾಗಿ 5,988 ಸಿಬ್ಬಂದಿ ನಿಯೋಜಿಸಲಾಗಿದೆ. ಜತೆಗೆ 255 ಸೂಕ್ಷ್ಮ ವೀಕ್ಷಕರು, 3,069 ಪೊಲೀಸರು ಹಾಗೂ 1,164 ಸಿಎಪಿಎಫ್ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ.

**ಮತಗಟ್ಟೆಯತ್ತ ಸಿಬ್ಬಂದಿ:** ಗುರುವಾರ ಬೆಳಗ್ಗೆ ಮತದಾನ ಪ್ರಕ್ರಿಯೆ ಆರಂಭವಾಗುವ ಹಿನ್ನೆಲೆಯಲ್ಲಿ ಬುಧವಾರ ಮತಗಟ್ಟೆ ಸಿಬ್ಬಂದಿ ಇವಿಎಂ ಮತ್ತು ವಿವಿ ಪ್ಯಾಟ್ ಯಂತ್ರಗಳನ್ನು ಮತಗಟ್ಟೆಗೆ ತೆಗೆದುಕೊಂಡು ಹೋದರು. ಮಧ್ಯಾಹ್ನ ಊಟ ಸಿಗದೆ ಕೆಲವೆಡೆ ಸಿಬ್ಬಂದಿ ಗಲಾಟೆ ಮಾಡಿದರಾದರೂ ನಂತರ ಬಿಬಿಎಂಪಿಯಿಂದ ಆಹಾರ ಸರಬರಾಜು ಮಾಡಲಾಯಿತು. ರಾತ್ರಿ ಮತಗಟ್ಟೆಯಲ್ಲಿ ತಂಗಿದ್ದ ಸಿಬ್ಬಂದಿಗೆ ಅವರಿರುವಲ್ಲಿಗೆ ಊಟದ ಸರಬರಾಜು ಮಾಡಲಾಯಿತು.



ಮತಗಟ್ಟೆಗಳಿಗೆ ಬುಧವಾರ ಚುನಾವಣಾ ಪರಿಕರಗಳನ್ನು ತೆಗೆದುಕೊಂಡು ಹೋಗುತ್ತಿರುವ ಸಿಬ್ಬಂದಿ.




### ಮತದಾರರಿಗೆ ಹಲವು ಸೌಲಭ್ಯ

ಅಂಗವಿಕಲ ಮತ್ತು ಹಿರಿಯ ನಾಗರಿಕರಿಗಾಗಿ ಮತಗಟ್ಟೆಗಳಲ್ಲಿ ಗಾಲಿಕುರ್ಚಿ ವ್ಯವಸ್ಥೆ ಮಾಡಲಾಗಿದೆ. ರ‍್ಯಾಂಪ್ ವ್ಯವಸ್ಥೆಯಿಲ್ಲದ ಮತಗಟ್ಟೆಗಳಲ್ಲಿ ತಾತ್ಕಾಲಿಕ ರ‍್ಯಾಂಪ್ ನಿರ್ಮಿಸಲಾಗಿದೆ. ಮತಗಟ್ಟೆಗೆ ಬರಲು ಶಕ್ತರಾಗದವರಿಗಾಗಿ ಓಲಾ, ಉಬರ್ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಅದಕ್ಕಾಗಿ ದೂ: 1950ಸಂಖ್ಯೆಗೆ ಕರೆ ಮಾಡಿ ಕ್ಯಾಬ್ ಬುಕ್ ಮಾಡಿಕೊಳ್ಳಬಹುದು.

### 9ಕ್ಕೆ ಮತ ಎಣಿಕೆ

ಗುರುವಾರ ಸಂಜೆ 6ರವರೆಗೆ ಮತದಾನಕ್ಕೆ ಅವಕಾಶ ನೀಡಲಾಗುತ್ತಿದೆ. ನಂತರ ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಮತಗಟ್ಟೆ ಸಿಬ್ಬಂದಿ ಡಿ-ಮಸ್ಟರಿಂಗ್ ಕೇಂದ್ರಗಳಿಗೆ ತಂದಿಡಲಿದ್ದಾರೆ. ಸೋಮವಾರ (ಡಿ. 9) ಡಿ-ಮಸ್ಟರಿಂಗ್ ಕೇಂದ್ರಗಳಲ್ಲೇ ಮತ ಎಣಿಕೆ ಕಾರ್ಯ ನಡೆಯಲಿದೆ.

### ಡಿ-ಮಸ್ಟರಿಂಗ್ ಕೇಂದ್ರಗಳು

- ಕೆ.ಆರ್.ಪುರ: ಜಯನಗರ 2ನೇ ಹಂತದ ಬಿಬಿಎಂಪಿ ಸಂಕೀರ್ಣ
- ಯಶವಂತಪುರ: ವಿಶ್ವೇಶ್ವರಯ್ಯ ಟವರ್
- ಮಹಾಲಕ್ಷ್ಮೀ ಲೇಔಟ್: ಜಯನಗರ 2ನೇ ಹಂತದ ಬಿಬಿಎಂಪಿ ಸಂಕೀರ್ಣ
- ಶಿವಾಜಿನಗರ: ಬಸವೇಶ್ವರನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ ಕಟ್ಟಡ

### ಮತದಾರರಿಗೆ ಹಣ ಹಂಚುತ್ತಿದ್ದ ಜೆಡಿಎಸ್ ಕಾರ್ಯಕರ್ತರ ಸೆರೆ

**30,100 ರೂ. ಜಪ್ತಿ**

ಬೆಂಗಳೂರು: ಉಪ ಚುನಾವಣೆ ಹಿನ್ನೆಲೆಯಲ್ಲಿ ಮಹಾಲಕ್ಷ್ಮೀ ಲೇಔಟ್‌ನ ಮುನೇಶ್ವರ ಬ್ಲಾಕ್‌ನಲ್ಲಿ ಮತದಾರರಿಗೆ ಹಣ ಹಂಚುತ್ತಿದ್ದ ಇಬ್ಬರು ಜೆಡಿಎಸ್ ಕಾರ್ಯಕರ್ತರನ್ನು ಮಹಾಲಕ್ಷ್ಮೀ ಲೇಔಟ್ ಪೊಲೀಸರು ಬಂಧಿಸಿದ್ದಾರೆ. ಗಂಗಾಧರಯ್ಯ (50) ಮತ್ತು ನಾಗೇಂದ್ರ (30) ಬಂಧಿತರು. ಇವರಿಂದ 30,100 ರೂ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳು ಬುಧವಾರ ಮಧ್ಯಾಹ್ನ ಮತದಾರರಿಗೆ ಹಣ ಹಂಚುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ಗಂಗಾಧರಯ್ಯ ಮತ್ತು ನಾಗೇಂದ್ರನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಹಣ ಹಂಚುತ್ತಿದ್ದ ವಿಚಾರವನ್ನು ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮತದಾರರಿಗೆ ತಲಾ 500 ರೂ. ನೀಡುತ್ತಿದ್ದರು. ಪೊಲೀಸರು ಬಂಧಿಸುವುದಕ್ಕೂ ಮುನ್ನ ಆರೋಪಿಗಳು 20 ಸಾವಿರ ರೂ.ಗಳನ್ನು ಮತದಾರರಿಗೆ ಹಂಚಿದ್ದರು ಎನ್ನಲಾಗಿದೆ.

### ಕಳೆದ ಬಾರಿಯ ಮತದಾನ ಪ್ರಮಾಣ

| ಕೆ.ಆರ್.ಪುರ | ಯಶವಂತಪುರ | ಮಹಾಲಕ್ಷ್ಮೀ ಲೇಔಟ್ | ಶಿವಾಜಿನಗರ |
|---|---|---|---|
| 51.9% | 58.43% | 55.69% | 56.53% |



ರಾಜಾಜಿನಗರದ ಮಸ್ಟರಿಂಗ್ ಕೇಂದ್ರದಲ್ಲಿ ಊಟಕ್ಕಾಗಿ ಸಿಬ್ಬಂದಿ ಜಟಾಪಟಿ.